ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ

ಸಂಖ್ಯೆ:ಸಕಾಅ6:ಕಉವಿ/ಸ.ಇಂ/2024-25
398

ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ,
ನಂ.6ನೇ ಕಟ್ಟಡಗಳ ಉಪ-ವಿಭಾಗ, 3ನೇ ಮಹಡಿ,
ಅನೆಕ್ಸ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು-01.
ದಿನಾಂಕ: 12-06-24

ರವರಿಗೆ,

ಕಾರ್ಯಪಾಲಕ ಅಭಿಯಂತರರು,
ನಂ.2 ಕಟ್ಟಡಗಳ ವಿಭಾಗ,
ಬೆಂಗಳೂರು.

ಮಾನ್ಯರೇ,

ವಿಷಯ : ಶಿಷ್ಯ ಬಿಇಎಂಎಲ್ ಪಬ್ಲಿಕ್ ಶಾಲೆ, ಶಿಷ್ಯ ಬಿಎಎಂಎಲ್ ಟೌನ್‌ಶಿಪ್, ನ್ಯೂ ತಿಪ್ಪಸಂದ್ರ, ಬೆಂಗಳೂರು-560 075 ನ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

ಉಲ್ಲೇಖ :
1. ಸರ್ಕಾರದ ಅಪರ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಬೆಂಗಳೂರುರವರ ಪತ್ರ ಸಂಖ್ಯೆ:ಲೋಇ 56 ಬಿಇಡಿ 2019 ದಿನಾಂಕ:06.05.2022.
2. ಶಿಷ್ಯ ಬಿಇಎಂಎಲ್ ಪಬ್ಲಿಕ್ ಶಾಲೆ, ಬೆಂಗಳೂರುರವರ ಮನವಿ ಪತ್ರ ದಿನಾಂಕ:

*******

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಶಿಷ್ಯ ಬಿಇಎಂಎಲ್ ಪಬ್ಲಿಕ್ ಶಾಲೆ, ಶಿಷ್ಯ ಬಿಎಎಂಎಲ್ ಟೌನ್‌ಶಿಪ್, ನ್ಯೂ ತಿಪ್ಪಸಂದ್ರ, ಬೆಂಗಳೂರು-560 075 ರವರು ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಒದಗಿಸಲು ಅಗತ್ಯವಿರುವುದಾಗಿ ತಿಳಿಸಿ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರ ನೀಡಲು ಉಲ್ಲೇಖ (2) ರ ಪತ್ರದಲ್ಲಿ ಕೋರಿರುತ್ತಾರೆ.

ಅದರಂತೆ, ಶಾಲಾ ಕಟ್ಟಡವನ್ನು ದಿನಾಂಕ:07.06.2024 ರಂದು ಶಿಷ್ಯ ಬಿಇಎಂಎಲ್ ಪಬ್ಲಿಕ್ ಶಾಲೆ, ರವರ ಉಪಸ್ಥಿತಿಯಲ್ಲಿ ಪರಿವೀಕ್ಷಿಸಲಾಗಿದ್ದು, ಕಟ್ಟಡವು ಸುಸ್ಥಿತಿಯಲ್ಲಿರುವುದನ್ನು ಗಮನಿಸಲಾಗಿರುತ್ತದೆ.

ಕಟ್ಟಡವು ನೆಲ ಮತ್ತು ಮೂರು ಮೇಲ್ಮಹಡಿಗಳ ಕಟ್ಟಡವಾಗಿದ್ದು, ಶೌಚಾಲಯಗಳು, ಶಾಲಾ ಕೊಠಡಿ, ಲ್ಯಾಬ್‌ಗಳು, ಲೈಬ್ರರಿ, ಸಿಬ್ಬಂದಿಗಳ ಕೊಠಡಿಗಳನ್ನು ಹೊಂದಿರುತ್ತದೆ.

ಸದರಿ ಕಟ್ಟಡಕ್ಕೆ ಸಂಬಂಧಿಸಿದ ದಾಖಲೆಗಳನ್ನು ಶಿಷ್ಯ ಬಿಇಎಂಎಲ್ ಪಬ್ಲಿಕ್ ಶಾಲೆ, ಬೆಂಗಳೂರುರವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

- ಶಿಷ್ಯ ಬಿಇಎಂಎಲ್ ಪಬ್ಲಿಕ್ ಶಾಲೆರವರ ಮನವಿ ಪತ್ರದಲ್ಲಿ ಸದರಿ ಕಟ್ಟಡವನ್ನು ಶಿಷ್ಯ ಬಿಎಎಂಎಲ್ ಟೌನ್‌ಶಿಪ್, ನ್ಯೂ ತಿಪ್ಪಸಂದ್ರ, ಬೆಂಗಳೂರು-560 075 ರಲ್ಲಿ ನಿರ್ಮಿಸಿರುವುದು ಕಂಡುಬಂದಿದ್ದು, ಸದರಿ ಕಟ್ಟಡದ ಮಾಲೀಕತ್ವವು "Sri Krishna Educational Trust" ರವರ ಹೆಸರಿನಲ್ಲಿರುತ್ತದೆ.
- ಕಟ್ಟಡದ ಸುರಕ್ಷತೆಗೆ ಸಂಬಂಧಿಸಿದಂತೆ ಕಟ್ಟಡದ ಕಾಂಕ್ರೀಟ್ ಸದೃಢತೆಯ ಬಗ್ಗೆ ದಿನಾಂಕ: 08.02.2023 ರಂದು ಇಎಫ್‌ಎಲ್ಲರ್ ಕನ್‌ಸ್ಟ್ರಕ್ಷನ್ಸ್ ಅಂಡ್ ಕನ್ಸಲ್‌ಟೆನ್ಸಿ ಸರ್ವೀಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರುರವರು Rebound Hammer Test & Ultra Sonic Test ಅನ್ನು ಕೈಗೊಂಡು ವರದಿಯನ್ನು ನೀಡಿದ್ದು, ಸದರಿ ಪರೀಕ್ಷೆಯಲ್ಲಿ ಕಟ್ಟಡದ ಕಾಂಕ್ರೀಟ್ ಉತ್ತಮ ಗುಣಮಟ್ಟದಿಂದ ಕೂಡಿರುತ್ತದೆ ಎಂದು ವರದಿ ನೀಡಿರುತ್ತಾರೆ.

ಸದರಿ ಸಂಸ್ಥೆಯವರು ನೀಡಿರುವ ದಾಖಲೆಗಳನ್ನು ಪರಿಶೀಲಿಸಲಾಗಿ, ಕಟ್ಟಡವು ರಚನಾತ್ಮಕವಾಗಿ ಸುರಕ್ಷಿತವಾಗಿರುವುದಾಗಿಯೂ ಹಾಗೂ ಕಟ್ಟಡಕ್ಕೆ ಉಪಯೋಗಿಸಿರುವ ಕಾಂಕ್ರೀಟ್ ಉತ್ತಮ ಗುಣಮಟ್ಟದ್ದಾಗಿರುವುದು ಪರೀಕ್ಷಾ ವರದಿಗಳಿಂದ ಕಂಡು ಬಂದಿರುವುದರಿಂದ ಹಾಗೂ ಈ ಕೆಳಕಂಡ ಷರತ್ತಿಗೊಳಪಟ್ಟು ಸದರಿ ಕಟ್ಟಡವು Structurally Sound ಆಗಿದೆ ಎಂದು ನಿರಾಕ್ಷೇಪಣಾ ಪತ್ರವನ್ನು ನೀಡಬಹುದಾಗಿರುತ್ತದೆ ಹಾಗೂ ಹಾಗೂ ಉಲ್ಲೇಖ (1) ರ ಆದೇಶದಲ್ಲಿ ರೂ.5000.00 ಗಳ ಮೊತ್ತವನ್ನು ಕಾರ್ಯಪಾಲಕ ಇಂಜಿನಿಯರ್‌ರವರ ಹೆಸರಿಗೆ ಶುಲ್ಕವಾಗಿ ಪಾವತಿಸಲು ಸೂಚಿಸಲಾಗಿರುತ್ತದೆ.

1. ಅಗ್ನಿಶಾಮಕ ಇಲಾಖೆ ಮತ್ತು ಇತರೆ ಸಂಬಂಧಪಟ್ಟ ಇಲಾಖೆಗಳ ಸಕ್ಷಮ ಪ್ರಾಧಿಕಾರಗಳಿಂದ ಅನುಮತಿ/ ಪ್ರಮಾಣ ಪತ್ರವನ್ನು ನಿಯಮಾವಳಿಗಳ ಅನ್ವಯ ನಿಗದಿತ ಸಮಯಗಳಲ್ಲಿ ಪಡೆಯತಕ್ಕದ್ದು.
2. ಕಟ್ಟಡವನ್ನು ಕಾಲಕಾಲಕ್ಕೆ ಉತ್ತಮ ಗುಣಮಟ್ಟದ ಸಾಮಾಗ್ರಿಗಳನ್ನು ಬಳಸಿ ತಜ್ಞರಿಂದ ವ್ಯವಸ್ಥಿತವಾಗಿ ನಿರ್ವಹಣೆ ಮಾಡತಕ್ಕದ್ದು.
3. ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಸುರಕ್ಷತೆಗೆ ಸಕಲ ಆದ್ಯತೆಯನ್ನು ನೀಡಿ ಸೂಕ್ತ ಸುರಕ್ಷತಾ ವ್ಯವಸ್ಥೆಯನ್ನು ಅಳವಡಿಸಿಕೊಳ್ಳತಕ್ಕದ್ದು.
4. ಕಟ್ಟಡದ ಸದೃಡತೆಗೆ ಧಕ್ಕೆಯಾಗುವಂತಹ ಯಾವುದೇ ಇತರೆ ಕಾಮಗಾರಿಗಳನ್ನು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯದೇ ಕೈಗೊಳ್ಳತಕ್ಕದ್ದಲ್ಲ.
5. ಕುಡಿಯುವ ನೀರು ಹಾಗೂ ಶೌಚಾಲಯಗಳಲ್ಲಿ ಸದಾ ಸ್ವಚ್ಚತೆಯನ್ನು ಕಾಪಾಡಿಕೊಳ್ಳತಕ್ಕದ್ದು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲಾ ಕಾಲೇಜಿಗೆ ಸಂಬಂಧಿಸಿದ ಎಲ್ಲಾ ನಿರ್ದೇಶನ ಹಾಗೂ ನಿಯಮಾವಳಿಯನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಅಡಕಗಳು: ಚೆಕ್ ಲಿಸ್ಟ್, ಇಎಫ್‌ಎಲ್ಲರ್ ಕನ್ಸ್‌ಸ್ಟ್ರಕ್ಷನ್ಸ್ ಅಂಡ್ ಕನ್ಸಲ್‌ಟೆನ್ಸಿ ಸರ್ವೀಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರುರವರು ನೀಡಿರುವ ವರದಿ ಮತ್ತು ಮೂಲ ಕಡತ.

ತಮ್ಮ ವಿಶ್ವಾಸಿ,

Rajalakshmi.R

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು,
ನಂ.6ನೇ ಕಟ್ಟಡಗಳ ಉಪ-ವಿಭಾಗ,
ಬೆಂಗಳೂರು.

ಸರ್ಕಾರಿ / ಅನುದಾನಿತ / ಅನುದಾನರಹಿತ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ Structural Stability ನಿರಾಕ್ಷೇಪಣಾ

ಪತ್ರ ನೀಡಲು ಸಲ್ಲಿಸಬೇಕಾಗಿರುವ **Check List**

| | | |
|---|---|---|
| 1 | ಹೆಸರು ಮತ್ತು ಪೂರ್ಣ ವಿಳಾಸ | ಶಿಷ್ಯ ಬಿಇಎಂಎಲ್ ಪಬ್ಲಿಕ್ ಶಾಲೆ, ಶಿಷ್ಯ ಬಿಎಂಎಲ್ ಟೌನ್‌ಶಿಪ್, ನ್ಯೂ ತಿಪ್ಪಸಂದ್ರ, ಬೆಂಗಳೂರು-560 075. |
| 2 | ಅರ್ಜಿ/ ಮನವಿಯನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸಿದ್ದಾರೆಯೇ | ಹೌದು |
| 3 | ಕರ್ನಾಟಕ ಸರ್ಕಾರ ಸುತ್ತೋಲೆ ಸಂಖ್ಯೆ: ಲೋಇ 39 ಬಿಇಡಿ 2019 ದಿನಾಂಕ:06.05.2022 ರನ್ವಯ ನಿಗದಿಪಡಿಸಿರುವ ಶುಲ್ಕದ ವಿವರಗಳು | ರೂ.5000.00 |
| 4 | ಪರಿವೀಕ್ಷಣೆ ಕೈಗೊಂಡಿರುವ ದಿನಾಂಕ ಹಾಗೂ ಲೋಕೋಪಯೋಗಿ ಇಲಾಖೆಯ ಇಂಜಿನಿಯರ್‌ಗಳ ವಿವರ | ದಿನಾಂಕ:.07.06.2024<br>ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ಸಹಾಯಕ ಇಂಜಿನಿಯರ್, ನಂ.6 ಕಟ್ಟಡಗಳ ಉಪ ವಿಭಾಗ, ಬೆಂಗಳೂರು. |
| 5 | 5 ವರ್ಷಕ್ಕಿಂತ ಮೇಲ್ಪಟ್ಟ ಅವಧಿಯಲ್ಲಿ ನಿರ್ಮಾಣಗೊಂಡು ಕಾರ್ಯನಿರ್ವಹಿಸಿರುವ ಕಟ್ಟಡಗಳಿಗೆ ಕೈಗೊಂಡಿರುವ Non destructive Test ವಿವರ ಹಾಗೂ ಫಲಿತಾಂಶ | ಕಟ್ಟಡವು 2017-18 ನೇ ಇಸವಿಯಲ್ಲಿ ನಿರ್ಮಾಣಗೊಂಡಿರುತ್ತದೆ. |
| | a) Rebound Hammer Test | ಲಗತ್ತಿಸಿದೆ. |
| | b) Ultrasonic Test | ಲಗತ್ತಿಸಿದೆ. |
| | c) | |
| 6 | 5 ವರ್ಷಕ್ಕಿಂತ ಒಳಗಿನ ಅವಧಿಯಲ್ಲಿ ನಿರ್ಮಾಣಗೊಂಡು ಕಾರ್ಯನಿರ್ವಹಿಸಿರುವ ಕಟ್ಟಡಗಳಿಗೆ:<br>1) ದಾಖಲಾತಿಗಳು ಲಭ್ಯವಿದ್ದಲ್ಲಿ<br>a) Non destructive Test (ಕಡ್ಡಾಯವಿರುವುದಿಲ್ಲ) ವಿವರ ಹಾಗೂ ಫಲಿತಾಂಶ | NA |
| | b) ದಾಖಲಾತಿಗಳು ಪರಿಶೀಲನೆ:<br>ಸಮರ್ಪಕ / ಅಸಮರ್ಪಕ | ಸಮರ್ಪಕ |
| | ಮೇಲ್ನೋಟಕ್ಕೆ ಕಟ್ಟಡದ ಸ್ಥಿತಿಗತಿ | ಉತ್ತಮ |
| | II) ದಾಖಲಾತಿಗಳು ಲಭ್ಯವಿಲ್ಲದೇ ಇದ್ದಲ್ಲಿ/ ಒದಗಿಸಿರುವ ದಾಖಲೆಗಳು ಅಸಮರ್ಪಕವಾಗಿದ್ದಲ್ಲಿ;<br>ಬಿ) ಮೇಲ್ನೋಟಕ್ಕೆ ಕಟ್ಟಡದ ಸ್ಥಿತಿಗತಿ: | NA |
| | b) Non destructive Test ವಿವರ ಹಾಗೂ ಫಲಿತಾಂಶ: | NA |
| 7 | ಕ್ರಮ ಸಂಖ್ಯೆ 5 ಮತ್ತು 6 ರನ್ವಯ ಹಾಗೂ ಕಟ್ಟಡದ ದೃಢತ್ವಕ್ಕೆ ಹಾನಿಯಾಗದ ಕನಿಷ್ಟ ದುರಸ್ಥಿ/ ರಿಪೇರಿಗಳ ಅವಶ್ಯಕತೆ ಇದ್ದಲ್ಲಿ ವಿವರಣೆ ಹಾಗೂ ಶಿಫಾರಸ್ಸು | ಕನಿಷ್ಟ ದುರಸ್ತಿ ಅವಶ್ಯಕತೆ ಇರುತ್ತದೆ. |
| 8 | Non destructive Test ಕೈಗೊಂಡಿರುವ LAB ವಿವರಗಳು | ಇಎಫ್‌ಎಲ್ಲರ್ ಕನ್ಸ್‌ಸ್ಟ್ರಕ್ಷನ್ಸ್ ಅಂಡ್ ಕನ್ಸ್‌ಲ್‌ಟೆನ್ಸಿ ಸರ್ವೀಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು. |
| 9 | ಛಾಯಚಿತ್ರಗಳ ಅಡಕ: | ಲಗತ್ತಿಸಿದೆ. |
| 10 | ಪರಿವೀಕ್ಷಣಾಧಿಕಾರಿಯವರ ಶಿಫಾರಸ್ಸು: | ಮೇಲ್ನೋಟಕ್ಕೆ ಕಟ್ಟಡವು ಸುಸ್ಥಿತಿಯಲ್ಲಿದ್ದು, ನಿರಾಪೇಕ್ಷಣಾ ಪತ್ರವನ್ನು ನೀಡಬಹುದಾಗಿರುತ್ತದೆ. |

Priyadarshini R

Assistant Executive Engineer,
No.6 Buildings Sub Division,
Bengaluru.

ಕಾರ್ಯಪಾಲಕ ಅಭಿಯಂತರರ ಕಛೇರಿ,
ನಂ.2ನೇ ಕಟ್ಟಡಗಳ ವಿಭಾಗ,
ಲೋ.ಇ. ಅನೆಕ್ಸ್ ಕಟ್ಟಡ, 1ನೇ ಮಹಡಿ,
ಕೆ.ಆರ್.ವೃತ್ತ, ಬೆಂಗಳೂರು

ಕರ್ನಾಟಕ ಸರ್ಕಾರ
**(ಲೋಕೋಪಯೋಗಿ ಇಲಾಖೆ)**

ಫೋನ್ : 080-22122856
ಫ್ಯಾಕ್ಸ್ : 080-22123368
Email : eebldno2@gmail.com

ಸಂಖ್ಯೆ:ಕಾನಿಇಂ:ಕವಿ2:ಆ.ಶಾ: 2023-24: 1238-240

ದಿನಾಂಕ : 12/06/2024

ಇವರಿಗೆ:

**ಶಿಷ್ಯ ಬಿಇಎಂಎಲ್ ಪಬ್ಲಿಕ್ ಶಾಲೆ,**
**ಶಿಷ್ಯ ಬಿಇಎಂಎಲ್ ಟೌನ್ ಶಿಪ್,**
**ನ್ಯೂ ತಿಪ್ಪಸಂದ್ರ,**
**ಬೆಂಗಳೂರು -560 075**

ಮಾನ್ಯರೇ,

**ವಿಷಯ** **2024-2025ನೇ ಸಾಲಿನ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ ನೀಡುವ ಬಗ್ಗೆ.**

**ಉಲ್ಲೇಖ**
1. ತಮ್ಮ ಮನವಿ ಪತ್ರ ದಿನಾಂಕ : 07-06-2024
2. ಕರ್ನಾಟಕ ಸರ್ಕಾರ ಸಚಿವಾಲಯದ ಸುತ್ತೋಲೆ ತಿದ್ದುಪಡಿ ದಿನಾಂಕ : 06-05-2022
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ. 6ನೇ ಕಟ್ಟಡಗಳ ಉಪವಿಭಾಗ, ಬೆಂಗಳೂರುರವರ ಕಛೇರಿ ಪತ್ರ ಸಂಖ್ಯೆ : 398, ದಿ: 12-06-2024

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಪತ್ರದಲ್ಲಿ **ಶಿಷ್ಯ ಬಿಇಎಂಎಲ್ ಪಬ್ಲಿಕ್ ಶಾಲೆ, ಶಿಷ್ಯ ಬಿಇಎಂಎಲ್ ಟೌನ್ ಶಿಪ್, ನ್ಯೂ ತಿಪ್ಪಸಂದ್ರ, ಬೆಂಗಳೂರು -560 075** ರವರ ಕಟ್ಟಡಕ್ಕೆ ಸಂಬಂಧಿಸಿದಂತೆ ಸುರಕ್ಷತಾ ಪ್ರಮಾಣ ಪತ್ರವನ್ನು ಕೋರಿರುತ್ತೀರಿ.

ಉಲ್ಲೇಖ (2ರ)ರ ಸರ್ಕಾರದ ಸುತ್ತೋಲೆ ತಿದ್ದುಪಡಿಯ ಅನುಸಾರ ಲೋಕೋಪಯೋಗಿ ಇಲಾಖೆ ಸಂಹಿತೆಯ ಅನ್ವಯ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರವನ್ನು ಈ ಕಛೇರಿಯಿಂದ ಪಡೆಯಲು ಮೌಲ್ಯ **ರೂ. 5,000.00** ಅನ್ನು (ಡಿ.ಡಿ. ಸಂಖ್ಯೆ : **903161,** ದಿನಾಂಕ : **12-06-2024**) ಈ ಕಛೇರಿಗೆ ಸಲ್ಲಿಸಿರುತ್ತೀರಿ.

ಮುಂದುವರೆದು, ದಿನಾಂಕ : **07-06-2024** ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ. 6ನೇ ಕಟ್ಟಡಗಳ ಉಪವಿಭಾಗ, ಬೆಂಗಳೂರುರವರು ಸ್ಥಳ ಪರಿವೀಕ್ಷಣೆ ಕೈಗೊಂಡಿರುತ್ತಾರೆ. ಉಲ್ಲೇಖಿತ (3)ರ ಪತ್ರದಲ್ಲಿ ಕೈಗೊಂಡಿರುವ ಪರೀಕ್ಷೆಗಳು ಹಾಗು ಉಲ್ಲೇಖ (2)ರ ಸರ್ಕಾರದ ಸುತ್ತೋಲೆಯನ್ವಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಪರಿವೀಕ್ಷಿಸಿ ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ, ಸದರಿ ಕಟ್ಟಡವು **"STRUCTURALLY STABLE"** ಎಂದು ಪರಿಗಣಿಸಿ ನಿರಾಕ್ಷೇಪಣಾ ಪತ್ರವನ್ನು ದಿನಾಂಕ : **12.06.2024** ರಿಂದ **11.06.2025ರ** ವರೆಗೆ ನೀಡಲಾಗಿದೆ.

ತಮ್ಮ ವಿಶ್ವಾಸಿ

ಕಾರ್ಯಪಾಲಕ ಅಭಿಯಂತರರು
ನಂ. 2ನೇ ಕಟ್ಟಡಗಳ ವಿಭಾಗ, ಬೆಂಗಳೂರು